ದಿನಾಂಕಃ **23-11-2023** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಹೆಚ್ ಎಲ್ ಬಿ ವಕೀಲರಿಂದಃ

ದಾವೆಗೆ ಸಂಬಂಧಿಸಿದಂತೆ ಈ ಕೆಳಗಿನ ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದು ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಳ್ಳಲು ಕೋರುತ್ತೇನೆ.

1. ದಾವಾ ಸ್ವತ್ತಿಗೆ ಸಂಬಂಧಪಟ್ಟಿರುವ ಆರ್ ಟಿ ಸಿ ಮತ್ತು ಹಕ್ಕು ಪತ್ರವನ್ನು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು.
2. ಪಿ ಡಿ ಒ ಅವರು ಮನೆ ಕಟ್ಟಲು ಕೊಟ್ಟಿರುವ ಲೈಸೆನ್ಸ್ ನ್ನು ನಿಪಿ 3 ಎಂದು ಗುರುತಿಸಲಾಯಿತು.
3. ದಾವಾ ಸ್ವತ್ತಿಗೆ ಸಂಬಂಧಪಟ್ಟಿರುವ 2 ಕಂದಾಯ ರಶೀದಿಗಳನ್ನು ಮತ್ತು ಖಾತಾ ಎಕ್ಸಟ್ರಾಕ್ಟನ್ನು ನಿಪಿ-4 , 5 ಮತ್ತು 6 ಎಂದು ಗುರುತಿಸಲಾಯಿತು.

ಪ್ರತಿವಾದಿಗಳು ಈ ದಿನ ಗೈರು ಹಾಜರು ಇರುವುದರಿಂದ ಪಾಟೀ ಸವಾಲಿಗೆ ಕಾಲವಾಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು,
ತಿಪಟೂರು.